ಇ) ಗುತ್ತಿಗೆದಾರರ ಕ್ಯಾಟರಿಂಗ್ ವ್ಯವಸ್ಥೆಯ ಬಗ್ಗೆ ಮೇಲಿಂದ ಮೇಲೆ ತಪಾಸಣೆಯನ್ನು ಮಾಡಲು ನಿವಾಸಿ ಆಯುಕ್ತರಿಗೆ ಸೂಚಿಸಲಾಗಿದೆ.

ದೆಹಲಿಯಲ್ಲಿನ ಕರ್ನಾಟಕ ಆಡಳಿತ ಕಾರ್ಯಾಲಯಗಳ ಕುರಿತು

2687 (3223) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ- ಗ್ರಾಮೀಣ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೆಹಲಿಯಲ್ಲಿ ಇರುವ ಕರ್ನಾಟಕ ವಿವಿಧ ಆಡಳಿತ ಕಾರ್ಯಾಲಯಗಳ ಸಂಖ್ಯೆ ಎಷ್ಟು?

ಆ) ಈ ಕಾರ್ಯಾಲಯಗಳ ಕಾರ್ಯಗಳ ಸಂಪೂರ್ಣ ವಿವರ ನೀಡುವುದು?

ಇ) ಈ ಕಾರ್ಯಾಲಯಗಳಲ್ಲಿ ಯಾವ ಯಾವ ಹುದ್ದೆಗಳು ಖಾಲಿ ಇವೆ? (ವಿವರ ನೀಡುವುದು)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ದೇಶದ ರಾಜಧಾನಿ ದೆಹಲಿಯಲ್ಲಿ ಈಕೆಳ ಕಂಡ ಕರ್ನಾಟಕ ವಿವಿಧ ಆಡಳಿತ ಕಾರ್ಯಾಲಯಗಳಿವೆ.

ನಿವಾಸಿ ಆಯುಕ್ತರ ಕಛೇರಿ

ಕರ್ನಾಟಕ ಭವನ- 1 ಕರ್ನಾಟಕ ಭವನ- 2, ಕರ್ನಾಟಕ ಭವನ - 3

ಕರ್ನಾಟಕ ವಾರ್ತಾ ಕೇಂದ್ರ

ಕರ್ನಾಟಕ ಉದ್ಯೋಗ ಮಿತ್ರ

ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿ.

ಕರ್ನಾಟಕ ಸಾಬೂನು ಹಾಗೂ ಮಾರ್ಜಕ ನಿ.

ಕರ್ನಾಟಕ ವಿದ್ಯುತ್ ನಿಗಮ ನಿ.

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿ.

(ಕಾವೇರಿ ಎಂಪೋರಿಯಂ)

ಕರ್ನಾಟಕ ಕೈ ಮಗ್ಗ ಅಭಿವೃದ್ಧಿ ನಿಗಮ

(ಪ್ರಿಯದರ್ಶಿನಿ)

ಮೈಸೂರು ಪೇಪರ್ ಮಿಲ್ಸ್

ಕಾವೇರಿ ವಾಟರ್ ಸೆಲ್

ಮೈಸೂರು ಲ್ಯಾಂಪ್ಸ್

ಆ) ನಿವಾಸಿ ಆಯುಕ್ತರ ಕಛೇರಿಯ ಮುಖ್ಯ ಕಾರ್ಯವೆಂದರೆ, ಕರ್ನಾಟಕ ಸರ್ಕಾರ ಹಾಗೂ ಕೇಂದ್ರ ನಡುವೆ ಸಮನ್ವಯ ಕಾರ್ಯ ನಿರ್ವಹಿಸುವುದು. ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ

ಹಣ ಬಿಡುಗಡೆ ಮಾಡಲು ವ್ಯವಹರಿಸುವುದು. ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವೆ ಬಾಕಿ ಕೆಲಸಗಳ ಬಗ್ಗೆ ಗಮನ ಹರಿಸುವುದು. ಗಣ್ಯರಿಗೆ ವಿದೇಶ ಪ್ರವಾಸಕ್ಕಾಗಿ ಪರವಾನಗಿ ಪಡೆಯುವುದು ಹಾಗೂ ಸೂಕ್ತ ಸೌಲಭ್ಯವನ್ನು ಒದಗಿಸುವುದು.

ಕರ್ನಾಟಕ ಭವನವು ಸನ್ಮಾನ್ಯ ರಾಜ್ಯಪಾಲರು, ಮುಖ್ಯ ಮಂತ್ರಿಯವರು, ಮಂತ್ರಿಗಳು, ಎಂಎಲ್‌ಎಗಳು, ಎಂಪಿಗಳು, ಗಣ್ಯ: ಅತಿ ಗಣ್ಯ ವ್ಯಕ್ತಿಗಳು ದೆಹಲಿಗೆ ಭೇಟಿ ನೀಡಿದಾಗ ಅವರುಗಳಿಗೆ ಸೂಕ್ತ ವಸತಿ, ಊಟೋಪಚಾರ, ಸಾರಿಗೆ ವ್ಯವಸ್ಥೆಯನ್ನುಮಾಡುವುದು.

ಕೇಂದ್ರ ಸರ್ಕಾರದ ವಿವಿಧ ಮಂತ್ರಾಲಯಗಳು : ಸಂಸ್ಥೆಗಳ ಅಧಿಕಾರಿಗಳೋಂದಿಗೆ ಭೇಟಿ ವ್ಯವಸ್ಥೆ ಮಾಡುವುದು.

ಕರ್ನಾಟಕ ವಾರ್ತಾ ಕೇಂದ್ರವು ಗಣ್ಯರ : ಅತಿಥಿಗಳ ಪತ್ರಿಕಾ ಸಭೆ ವಿಚಾರ ಸಂಕೀರ್ಣಗಳ ವ್ಯವಸ್ಥೆ ಮಾಡುವುದು. ವಿವಿಧ ವೃತ್ತ ಪತ್ರಿಕೆಗಳಲ್ಲಿ ಪ್ರಕಟಣೆಗಳನ್ನು ಹೊರಡಿಸುವಲ್ಲಿ ಸಹಕರಿಸುವುದು. ಕರ್ನಾಟಕ ರಾಜ್ಯದ ಬಗ್ಗೆ ಜನರಿಗೆ ಮಾಹಿತಿ ಒದಗಿಸುವುದು.

ಕರ್ನಾಟಕ ಉದ್ಯೋಗ ಮಿತ್ರವು ಕರ್ನಾಟಕ ರಾಜ್ಯಕ್ಕೆಹೊರದೇಶ: ಹೊರರಾಜ್ಯದ ಕೈಗಾರಿಕಾಸಂಸ್ಥೆಗಳಿಂದ ಬಂಡವಾಳಗಳನ್ನುಹೂಡಲು ಆಕರ್ಷಿಸುವುದು. ಕರ್ನಾಟಕ ರಾಜ್ಯದ ಬಗ್ಗೆ ದೂರೆಯುವ ಕೈಗಾರಿಕಾ ಮೂಲಭೂತ ಸೌಲಭ್ಯಗಳನ್ನು ತಿಳಿಸುವುದು. ವಿದೇಶಿ ರಾಯಭಾರಿ ಕಛೇರಿಗಳ ಸಂಪರ್ಕವನ್ನು ಪಡೆದು ಬಂಡವಾಳ ಹೂಡಿಕೆಗೆ ಅನುಕೂಲವಾಗುವಂತೆ ವಾತಾವರಣವನ್ನು ಕಲ್ಪಿಸುವುದು. ಕೈಗಾರಿಕೆಗೆ ಸಂಬಂಧಪಟ್ಟ ವಿಷಯಗಳನ್ನು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸುವುದು. ಎಫ್‌ಐಸಿಸಿಐ.ಸಿಐಐ ಮತ್ತು ಎಲ್ಲಾ ವಾಣಿಜ್ಯ ಮಂಡಳಿಗಳೊಂದಿಗೆ ವ್ಯವಹಾರವನ್ನು ನಡೆಸುವುದು.

ಕಾವೇರಿ ವಾಟರ್ ಸೆಲ್‌ನ ಮುಖ್ಯ ಕಾರ್ಯಗಳು ರಾಜ್ಯದ ಅನೇಕ ನದಿಗಳ ಜಲ ವಿವಾದಕ್ಕೆ ಸಂಬಂಧಪಟ್ಟ ವಿವಾದಗಳನ್ನು ಬಗೆಹರಿಸುವುದು ಹಾಗೂ ಸರ್ವೋಚ್ಚ ನ್ಯಾಯಾಲಯಗಳಲ್ಲಿ ಮತ್ತು ನ್ಯಾಯಮಂಡಲಿಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಬೇಗ ಇತ್ಯರ್ಥಗೊಳಿಸಲು ಕ್ರಮ ತೆಗೆದುಕೊಳ್ಳುವುದು.(ಅ)ರಲ್ಲಿನ ಉಳಿದ ಸಂಸ್ಥೆಗಳು ರಾಜ್ಯಸರ್ಕಾರದ ಉದ್ಯಮಗಳ ಸಂಪರ್ಕ ಶಾಖೆಗಳಾಗಿರುತ್ತವೆ.

ಇ)ಹಾಲಿ ಸೃಜಿತವಾದ ಹುದ್ದೆಗಳು ಸೇರಿದಂತೆ ಕರ್ನಾಟಕ ಭವನ ಹಾಗೂ ನಿವಾಸಿ ಆಯುಕ್ತರ ಕಛೇರಿಯಲ್ಲಿ 29 ಹುದ್ದೆಗಳು ಖಾಲಿ ಇರುತ್ತದೆ.

ಗ್ರೂಪ್ -ಎ	ಒಂದು
ಗ್ರೂಪ್-ಬಿ	ಎರಡು
ಗ್ರೂಪ್-ಸಿ	ಹದಿನೇಳು
ಗ್ರೂಪ್-ಡಿ	ಒಂಬತ್ತು

ಕರ್ನಾಟಕ ವಾರ್ತಾ ಕೇಂದ್ರದಲ್ಲಿ ಒಂದು ಸಹಾಯಕ ನಿರ್ದೇಶಕರು, ಒಂದು ವಾಹನ ಚಾಲಕರು ಹಾಗೂ ಒಂದು ಸ್ವಾಗತಕಾರರ ಹುದ್ದೆಗಳು ಖಾಲಿ ಇರುತ್ತವೆ.

ಕಾವೇರಿ ವಾಟರ್‌ಸೆಲ್‌ನಲ್ಲಿ ಅಧಿಕಾರಿಗಳು ರೊಟೇಶನ್ ಬೇಸಿಸ್ (ಒಬ್ಬರಾದ ನಂತರ ಒಬ್ಬರು) ಮಾತ್ರ ಇಲಾಖೆಯಿಂದ ಕಾರ್ಯ ನಿರ್ವಹಿಸುತ್ತಾರೆ.

ಕರ್ನಾಟಕ ಉದ್ಯೋಗ ಮಿತ್ರ ಕಛೇರಿಯಲ್ಲಿ ಯಾವುದೇ ಹುದ್ದೆಗಳು ಖಾಲಿ ಇರುವುದಿಲ್ಲ.

(ಅ) ರಲ್ಲಿನ ಉಳಿದ ಸಂಸ್ಥೆಗಳು ರಾಜ್ಯಸರ್ಕಾರದ ಉದ್ಯಮಗಳ ಸಂಪರ್ಕ ಶಾಖೆಗಳಾಗಿದ್ದು ಸದರಿ ಶಾಖೆಗಳ ಆಡಳಿತ ನಿರ್ವಹಣೆಯನ್ನು ಬೆಂಗಳೂರಿನಲ್ಲಿನ ಸದರಿ ಸಂಸ್ಥೆಗಳ ಕೇಂದ್ರ ಕಛೇರಿಗಳೇ ನೋಡಿ ಕೊಳ್ಳುತ್ತವೆ.

ಕರ್ನಾಟಕ ಭವನದಲ್ಲಿ ಮಂಜೂರಾಗಿರುವ ಹುದ್ದೆಗಳ ಬಗ್ಗೆ

2688 (3224) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ - ಗ್ರಾಮೀಣ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವದೆಹಲಿಯ ಕರ್ನಾಟಕ ಭವನದಲ್ಲಿ ಮಂಜೂರಾಗಿರುವ ಹುದ್ದೆಗಳೆಷ್ಟು; ಈ ಹುದ್ದೆಗಳಲ್ಲಿ ಕರ್ನಾಟಕ ರಾಜ್ಯದವರೆಷ್ಟಿದ್ದಾರೆ; ಅನ್ಯ ರಾಜ್ಯದವರೆಷ್ಟು;

ಆ) ಕರ್ನಾಟಕ ಭವನದಲ್ಲಿ ಸಾಕಷ್ಟು ಕನ್ನಡಿಗ ಸಿಬ್ಬಂದಿ ಇಲ್ಲದೆ ಇರುವುದರಿಂದ ಕರ್ನಾಟಕದಿಂದ ಹೋಗುವ ಅತಿಥಿಗಳಿಗೆ ತೊಂದರೆ ಯುಂಟಾಗುತ್ತಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) 1998-99ಮತ್ತು 1999-2000ನೇ ಸಾಲಿನಲ್ಲಿ ದೆಹಲಿ ಕರ್ನಾಟಕ ಭವನವು ಬಾಡಿಗೆ ಆಧಾರದ ಮೇಲೆ ಪಡೆದ ಕಾರುಗಳ ಸಂಖ್ಯೆ ಎಷ್ಟು; ಮತ್ತು ಈ ಸಂಬಂಧಪಾವತಿ ಮಾಡಿರುವ ಒಟ್ಟು ಮೊತ್ತವೆಷ್ಟು;

ಈ) ಕರ್ನಾಟಕ ಭವನದಿಂದ 1998-99ಮತ್ತು 1999-2000ನೇ ಸಾಲಿನಲ್ಲಿ ಬಂದಿರುವ ಒಟ್ಟು ಆದಾಯವೆಷ್ಟು; ಹಾಗೂ ಆಗಿರುವ ವೆಚ್ಚವೆಷ್ಟು? (ಬಾಡಿಗೆ ಕಾರುಗಳ ವೆಚ್ಚವನ್ನು ಸೇರಿ)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಕರ್ನಾಟಕ ಭವನದಲ್ಲಿ ಒಟ್ಟು ಮಂಜೂರಾಗಿರುವ 199 ಹುದ್ದೆಗಳಲ್ಲಿ 169 ನೌಕರರು ಕಾರ್ಯ ನಿರ್ವಹಿಸುತ್ತಿದ್ದು, ಅವರಲ್ಲಿ72 ಜನ ಕನ್ನಡೇತರರು ಹಾಗೂ 97 ಜನ ಕನ್ನಡಿಗರು ಇದ್ದಾರೆ.

ಆ) ಇಲ್ಲ.

ಇ)

ವರ್ಷ	ಕಾರು ಸಂಖ್ಯೆ	ಪಾವತಿ ಮಾಡಿರುವ ಹಣ
1998-1999	1253	ರೂ. 5,51,154.00
1999-2000	813	ರೂ. 3,70,129.00
ಒಟ್ಟು	**2066**	**ರೂ. 9,21,283.00**